ಉ. ಬೆಳ್ತಂಗಡಿ ತಾಲ್ಲೂಕಿನ ಸುಲ್ಕೇರಿ - ನೆಲ್ಲಿತಕ್ಕ ಗ್ರಾಮದ ಬಳಿ ಇರುವ ಮಾಡಿಕೆತೋಡು ತೋಡಿಗೆ ಕಿರು ಸೇತುವೆ ನಿರ್ಮಾಣ ಮಾಡುವ ಬಗ್ಗೆ.

ಊ. ಬೆಳ್ತಂಗಡಿ ತಾಲ್ಲೂಕಿನ ನಾವೂರು ಗ್ರಾಮದಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸುವ ಬಗ್ಗೆ

ಹಾಗೂ

ಋ. ಮೂಲಭಂತಿ ಗ್ರಾಮದ ಅಡ್ಕ-ಅನಡ್ಕ ರಸ್ತೆಯ ಬೈಕಳ ಎಂಬಲ್ಲಿ "ನಂದಿಕಾಡು" ತೊಳೆಗೆ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಅರ್ಜಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಛೇರ್ಮನ್ : ಅರ್ಜಿಗಳನ್ನು ಒಪ್ಪಿಸಲಾಯಿತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ,

ಅ. ದಕ್ಷಿಣ ಕನ್ನಡ ಸಹಕಾರಿ ಮೀನು ಮಾರಾಟ ಫೆಡರೇಷನ್ ಮೂಲಕ ಗಿಲ್ನೆಟ್ ಮೀನುಗಾರಿಕೆಗೆ ನೀಡಿದ ಸಾಲವನ್ನು ಮನ್ನಾ ಮಾಡುವ ಬಗ್ಗೆ.

ಹಾಗೂ

ಆ. ಕರ್ನಾಟಕ ರಾಜ್ಯದಲ್ಲಿ ಹೊಲಿಗೆ ಕೆಲಸಗಾರರ ಕ್ಷೇಮ ನಿಧಿ ಬೋರ್ಡನ್ನು ಸ್ಥಾಪಿಸಿ ಸವಲತ್ತುಗಳನ್ನು ಒದಗಿಸುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಛೇರ್ಮನ್ : ಅರ್ಜಿಯನ್ನು ಒಪ್ಪಿಸಲಾಯಿತು.

9. ಗಮನ ಸೆಳೆಯುವ ಸೂಚನೆ:

(ಅ) ಸಕ್ಕರೆ ನಿರ್ದೇಶನಾಲಯವನ್ನು ಬೆಂಗಳೂರಿನಿಂದ ಬೆಳಗಾವಿಗೆ ಸ್ಥಳಾಂತರಿಸುವುದರಿಂದ ಆಗಿರುವ ತೊಂದರೆ ಬಗ್ಗೆ.

ಶ್ರೀಯುತವಾದ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮತ್ತು ಎಂ.ಎಸ್. ಆತ್ಮಾನಂದ (ಮಂಡ್ಯ) : ಛೇರ್ಮನ್‌ರವರೆ, ಬೆಂಗಳೂರಿನಲ್ಲಿರುವ ಸಕ್ಕರೆ ನಿರ್ದೇಶನಾಲಯವನ್ನು ಬೆಳಗಾವಿಗೆ ಸ್ಥಳಾಂತರಿಸುವುದರಿಂದ ಉಂಟಾಗುವ ತೊಂದರೆಗಳ ಬಗ್ಗೆ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರ ಗಮನಸೆಳೆಯುತ್ತೇವೆ.

+ ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು) : ಮಾನ್ಯ ಛೇರ್ಮನ್‌ರವರೆ, ಸಕ್ಕರೆ ನಿರ್ದೇಶನಾಲಯವನ್ನು 1973 ರಲ್ಲಿ ಪ್ರಾರಂಭಿಸಲಾಗಿ, ಈ ನಿರ್ದೇಶನಾಲಯಕ್ಕೆ ಬೆಂಗಳೂರಿನಲ್ಲಿ ಮಾತ್ರ ಕೇಂದ್ರ ಕಛೇರಿ ಇರುತ್ತದೆ. ಬೇರೆ ಇಲಾಖೆಯಂತೆ ವಿಭಾಗ ಮಟ್ಟದ, ಜಿಲ್ಲಾ ಮಟ್ಟದ, ಉಪ ವಿಭಾಗ ಮತ್ತು ತಾಲ್ಲೂಕು ಮಟ್ಟದ ಯಾವುದೇ ಅಧೀನ ಕಛೇರಿಗಳು ಇರುವುದಿಲ್ಲ ಸಕ್ಕರೆ ನಿರ್ದೇಶನಾಲಯವನ್ನು ಪ್ರಾರಂಭಿಸಿದಾಗ ರಾಜ್ಯದಲ್ಲಿ ಕೇವಲ 12 ಸಕ್ಕರೆ ಕಾರ್ಖಾನೆಗಳು ಇದ್ದು ಈಗ ರಾಜ್ಯದಲ್ಲಿ 35 ಸಕ್ಕರೆ ಕಾರ್ಖಾನೆಗಳು ಇರುತ್ತವೆ. ಅವುಗಳಲ್ಲಿ 18 ಸಹಕಾರಿ ವಲಯದಲ್ಲಿ, 2 ಸಾರ್ವಜನಿಕ ವಲಯದಲ್ಲಿ, 1 ಜಂಟಿ ವಲಯದಲ್ಲಿ ಹಾಗೂ 14 ಖಾಸಗಿ ವಲಯದಲ್ಲಿರುತ್ತವೆ. ಇವುಗಳ ದಿನನಿತ್ಯ ಕಬ್ಬು ಸುರಿಸುವ ಪ್ರಮಾಣ

86,500 ಟನ್ ಗಳಷ್ಟಿರುತ್ತದೆ. ಈ ಕಾರ್ಖಾನೆಗಳು ಕಳೆದ 3 ವರ್ಷಗಳಲ್ಲಿ 38.68 ಲಕ್ಷ ಟನ್ ಸಕ್ಕರೆಯನ್ನು ಉತ್ಪಾದಿಸಿರುತ್ತವೆ.

ಈ ಕಾರ್ಖಾನೆಗಳ ಸಂಖ್ಯೆಯು 2001-2002 ರೊಳಗಾಗಿ 35 ರಿಂದ 49ಕ್ಕೆ ಏರಬಹುದಾಗಿದೆ. ಅದರಂತೆ ಅವುಗಳ ಸಾಮರ್ಥ್ಯ ಸಹ ಪ್ರತಿನಿತ್ಯ 86,500 ಟನ್ ಗಳಿಂದ 1,21,500 ಟನ್ ಗಳಿಗೆ ಹೆಚ್ಚಬಹುದಾಗಿದೆ. ಇದಲ್ಲದೆ ಮುಂಬರುವ ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಐ.ಇ.ಎಮ್. ಪಡೆದ ಸುಮಾರು 25 ಸಂಸ್ಥೆಗಳು ಖೈಕಿ ಕೆಲವು ಸಕ್ಕರೆ ಕಾರ್ಖಾನೆ ಸ್ಥಾಪಿತವಾಗುವ ಸಾಧ್ಯತೆಗಳಿವೆ. ಆದುದರಿಂದ ರಾಜ್ಯದ ಎಲ್ಲಾ ಭಾಗಗಳಲ್ಲಿ ಹೆಚ್ಚೂ ಕಡಿಮೆ ಹರಡಿಕೊಂಡಂತಾಗುತ್ತದೆ.

2000-2001ನೇ ಸಾಲಿನ ಆಯವ್ಯಯ ಮಂಡನೆಯ ಕಂಡಿಕೆ 88 ರಂತೆ ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸಬೇಕೆಂಬ ದೃಷ್ಟಿಯಿಂದ ಉಳಿದ 4-5 ಬೇರೆ ಬೇರೆ ಇಲಾಖೆಗಳ ಜೊತೆಗೆ ಸಕ್ಕರೆ ನಿರ್ದೇಶನಾಲಯವನ್ನೂ ಸಹ ಬೆಂಗಳೂರಿನಿಂದ ಬೆಳಗಾವಿಗೆ ಸ್ಥಳಾಂತರಿಸಲು ಸರ್ಕಾರವು ತೀರ್ಮಾನ ಕೈಗೊಂಡಿರುತ್ತದೆ. ಅದರಂತೆ ಸರ್ಕಾರವು ದಿನಾಂಕ: 3-2-2001 ರಂದು ಸ್ಥಳಾಂತರಕ್ಕೆ ಆದೇಶವನ್ನು ಹೊರಡಿಸಲಾಗಿ, ದಿನಾಂಕ: 21-2-2001 ರಂದು ಕಛೇರಿಯ ಸಾಂಕೇತಿಕ ಪ್ರಾರಂಭೋತ್ಸವವನ್ನು ಜರುಗಿಸಲಾಗಿದೆ. ಕಛೇರಿಯ ಸ್ಥಳಾಂತರದ ಖರ್ಚಿಗಾಗಿ ಸರ್ಕಾರವು ರೂ.15.00 ಲಕ್ಷ ಮಂಜೂರು ಮಾಡಿದೆ. ಈ ಕಛೇರಿಯನ್ನು ಬೆಳಗಾವಿ ನಗರದಲ್ಲಿರುವ ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಶಾಖಾ ಕಟ್ಟಡದ ಮೊದಲ ಮಹಡಿಯನ್ನು ಬಾಡಿಗೆ ಪಡೆದುಕೊಂಡು ಕಛೇರಿಯ ದಿನ ನಿತ್ಯದ ವ್ಯವಹಾರಕ್ಕೆ ಅನುಕೂಲವಾಗುವಂತೆ ಕಟ್ಟಡದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಡುವಂತೆ ಸದರಿ ಬ್ಯಾಂಕಿನವರನ್ನು ವಿನಂತಿಸಲಾಗಿದೆ.

ರಾಜ್ಯದ ಈಶಾನ್ಯ ಭಾಗದ ಗುಲ್ಬರ್ಗಾ, ಬೀದರ್ ಕಡೆಯ ಕಾರ್ಖಾನೆಗಳಿಂದ ಬೆಳಗಾವಿ ನಗರಕ್ಕೆ ಸಂಪರ್ಕ ವ್ಯವಸ್ಥೆ ಬೆಂಗಳೂರಿಗೆ ಇರುವಂತೆ ಅನುಕೂಲಕರವಾಗಿಲ್ಲದಿರುವುದರಿಂದ ಹಾಗೂ ಸಕ್ಕರೆ ನಿರ್ದೇಶನಾಲಯಕ್ಕೆ ಹೆಚ್ಚಿನ ವಿಷಯದಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಲು ಪ್ರಾಧಿಕಾರ ಇಲ್ಲದೆ ಇರುವುದರಿಂದ, ಎಲ್ಲಾ ಸಕ್ಕರೆ ಕಾರ್ಖಾನೆಗಳು ಸರ್ಕಾರವನ್ನು ಸಂಪರ್ಕಿಸುವುದು ಅನಿವಾರ್ಯವಾಗಿರುವುದರಿಂದ ದಕ್ಷಿಣ ಭಾಗದಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ತೊಂದರೆಯಾಗದಂತೆ ಹಾಗೂ ಈ ಭಾಗದ ಕಬ್ಬು ಬೆಳೆಗಾರರಿಗೆ ಅನುಕೂಲವಾಗುವಂತೆ ಸಕ್ಕರೆ ನಿರ್ದೇಶನಾಲಯವನ್ನು ಇನ್ನೂ ಬಲಪಡಿಸುವ ಸಲುವಾಗಿ ಬೆಂಗಳೂರಿನಲ್ಲಿ ಒಂದು ಪ್ರಾದೇಶಿಕ ಕಛೇರಿಯನ್ನು ತೆರೆಯುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

+ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಛೇರ್ಮನ್‌ರವರೆ, ನಿನ್ನೆ ದಿವಸವೂ ಬಜೆಟ್ ಮೇಲೆ ಮಾತನಾಡುವಾಗ ಈ ವಿಷಯದ ಬಗ್ಗೆ ಮಾತನಾಡಿದ್ದೇನೆ. ಸಕ್ಕರೆ ನಿರ್ದೇಶಕರವರ ಕಛೇರಿಯನ್ನು ಬೆಂಗಳೂರಿನಿಂದ ಬೆಳಗಾವಿಗೆ ವರ್ಗ ಮಾಡಿರುವ ಬಗ್ಗೆ ನನ್ನ ಅಭಿಪ್ರಾಯವೇನೆಂದರೆ, ಕಾರ್ಯದರ್ಶಿಗಳು ಹಾಗೂ ಸಚಿವರು ಬೆಂಗಳೂರಿನಲ್ಲಿರುವಾಗ ಕೇವಲ ನಿರ್ದೇಶಕರ ಕಛೇರಿಯನ್ನು ಬೆಳಗಾವಿಗೆ ವರ್ಗ ಮಾಡಿದರೆ, ಪ್ರಾಯಶಃ ಅಲ್ಲಿಂದ ಸೆಕ್ರೆಟರಿಗಳಿಗೆ

ಹೋಗಿ ನಂತರ ಮಂತ್ರಿಗಳ ಹತ್ತಿರ ಪ್ರತಿಯೊಂದು ಕಡತ ಬರಬೇಕಾಗುತ್ತದೆ. ಅದರ ಜೊತೆಗೆ ಈ ಭಾಗದ ಎಲ್ಲಾ ಕಡತಗಳು ಬೆಳಗಾವಿಗೆ ಹೋಗಿ ಪುನಃ ಬೆಂಗಳೂರಿಗೆ ವಾಪಸ್ ಬರಬೇಕಾಗುತ್ತದೆ. ಪುನಃ ಬೆಂಗಳೂರಿನಿಂದ ಬೆಳಗಾವಿಗೆ ಹೋಗಿ ಅಲ್ಲಿಂದ ಕಾರ್ಖಾನೆಗಳಿಗೆ ಹೋಗಬೇಕಾಗುತ್ತದೆ. ಏಕೆಂದರೆ, ಶಾಸಕರುಗಳು ಬೆಂಗಳೂರಿಗೆ ಬಂದಾಗ ಅವರಿಗೆ ಕೆಲಸವನ್ನು ಮುಗಿಸಲಿಕ್ಕೆ ಸಾಧ್ಯವಾಗುತ್ತದೆ ಇಲ್ಲದಿದ್ದರೆ ಬೆಳಗಾವಿಗೆ ಹೋಗಿ ಪುನಃ ಬರುವುದು ಸ್ವಲ್ಪ ಕಷ್ಟವಾಗುತ್ತದೆ, ಆದ್ದರಿಂದ ಇದರ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

+ ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಛೇರ್ಮನ್‌ರವರೆ, ಮಾನ್ಯ ಸಚಿವರು ತಮ್ಮ ಹೇಳಿಕೆಯಲ್ಲಿ ಈಶಾನ್ಯ ಭಾಗಕ್ಕೂ ಕೂಡ ಸಂಪರ್ಕ ವ್ಯವಸ್ಥೆ ಅನುಕೂಲಕರವಾಗಿಲ್ಲವೆಂದು ತಿಳಿಸಿದ್ದಾರೆ. ಅದೇ ರೀತಿಯಲ್ಲಿ ದಕ್ಷಿಣ ಭಾಗದಲ್ಲಿ ಇರುವ ಸಕ್ಕರೆ ಕಾರ್ಖಾನೆಗಳು ಬೆಳಗಾವಿಯಿಂದ ಸುಮಾರು 700 ಕಿ.ಮೀ. ದೂರದಲ್ಲಿದೆ. ಇದರ ಜೊತೆಗೆ ಇದಕ್ಕೆ ಸಂಬಂಧಿಸಿದ ಸಚಿವಾಲಯವೂ ಕೂಡ ಇಲ್ಲಿದೆ. ಸಕ್ಕರೆ ಕಾರ್ಖಾನೆಗಳ ಅಡಳಿತ ಕಛೇರಿಗಳು ಬಹುತೇಕ ಬೆಂಗಳೂರಿನಲ್ಲಿವೆ ಹಾಗೂ ಈ ಕಾರ್ಖಾನೆಗಳನ್ನು ಪ್ರತಿನಿಧಿಸುವ ಅಧಿಕಾರಿಗಳೂ ಕೂಡ ಬೆಂಗಳೂರಿನಲ್ಲಿರುತ್ತಾರೆ. ಸಕ್ಕರೆ ಮಾರಾಟ ಮಾಡುವುದು ವಿಶೇಷವಾಗಿ ಬೆಂಗಳೂರಿನಲ್ಲಿ ಇರುವುದರಿಂದ ಸಕ್ಕರೆ ನಿರ್ದೇಶನಾಲಯವನ್ನು ಬೆಳಗಾವಿಗೆ ವರ್ಗಾಯಿಸಿರುವುದನ್ನು ಪುನಃ ಬೆಂಗಳೂರಿಗೆ ಸ್ಥಳಾಂತರ ಗೊಳಿಸಲು ಮರುಪರಿಶೀಲಿಸಬೇಕೆಂದು ವಿನಂತಿಸುತ್ತಾ, ಇದು ಆಗದೇ ಇದ್ದರೆ ಲೋಕೋಪಯೋಗಿ ಇಲಾಖೆಯಲ್ಲಿ ಎರಡು ಮುಖ್ಯ ಇಂಜಿನಿಯರ್‌ಗಳನ್ನು ಉತ್ತರ ಹಾಗೂ ದಕ್ಷಿಣ ಭಾಗಗಳಿಗೆ ನೇಮಿಸಿದ್ದಾರೆ, ಇದೇ ಮಾದರಿಯಲ್ಲಿ ಎಲ್ಲಾ ಅಧಿಕಾರವನ್ನು ಕೊಟ್ಟು ದಕ್ಷಿಣ ಭಾಗದ ಸಕ್ಕರೆ ಕಾರ್ಖಾನೆಗಳಿಗೆ ಹೊಂದಿಕೊಂಡಂತೆ ಒಂದು ನಿರ್ದೇಶನಾಲಯವನ್ನು ಇಲ್ಲಿ ಇಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ನಿವೇದಿಸುತ್ತಾ, ಇದರ ಜೊತೆಗೆ ದಕ್ಷಿಣ ಭಾಗಕ್ಕೆ ಒಳಗೊಂಡಂತೆ ಸಕ್ಕರೆ ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸುತ್ತೇವೆಂದು ಈ ಹಿಂದೆ ಮಾನ್ಯ ಸಚಿವರು ಭರವಸೆ ನೀಡಿದ್ದರು, ಇದನ್ನು ಕಾರ್ಯಗತಗೊಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಛೇರ್ಮನ್‌ರವರೆ, ಮಾನ್ಯ ಸಚಿವರು ಉತ್ತರದಲ್ಲಿ ಹೇಳಿರುವಂತೆ, ಹೆಚ್ಚಿನ ವಿಷಯದಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಲು ಪ್ರಾಧಿಕಾರ ಇಲ್ಲವೆಂದು ಹೇಳುತ್ತಾರೆ, ಹೀಗಿದ್ದಾಗ ಈ ಪ್ರಾಧಿಕಾರವನ್ನು ಅಲ್ಲಿಗೆ ಏಕೆ ತೆಗೆದುಕೊಂಡು ಹೋಗಬೇಕು? ಅವರ ಪ್ರಕಾರ final decision will have to be taken by the Secretary and the Minister. ಇದಕ್ಕೋಸ್ಕರ ನಾನು ತಮ್ಮಲ್ಲಿ, ಪ್ರಾದೇಶಿಕ ಕಛೇರಿ ಏನು ತೆರೆಯುತ್ತಿದ್ದೀರಿ ಇದನ್ನು ಬೆಳಗಾವಿಯಲ್ಲಿ ತೆರೆಯಿರಿ, ನಿರ್ದೇಶನಾಲಯ ಇಲ್ಲಿಯೇ ಇರಲಿ. ಏಕೆಂದರೆ ಮಾನ್ಯ ಆತ್ಮಾನಂದರವರು ಹೇಳಿದ ಹಾಗೆ ಎಲ್ಲಾ ಕಛೇರಿಗಳು ಇಲ್ಲಿ ಇವೆ. ಹೀಗಾಗಿ ನಿರ್ದೇಶನಾಲಯ ಇಲ್ಲಿಯೇ ಇರಲಿ ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಎ. ಕೃಷ್ಣಪ್ಪ (ಸಕ್ಕರೆ ಹಾಗೂ ಪಶುಸಂಗೋಪನಾ ಸಚಿವರು) : ಮಾನ್ಯ ಛೇರ್ಮನ್‌ರವರೆ, ಸನ್ಮಾನ್ಯ ಸದಸ್ಯರು ಸಲಹೆಯನ್ನು ಕೊಟ್ಟಿದ್ದಾರೆ, more number of

factories, movement of people convenience and imbalance in the administration, ಈ ಮೂರು ವಿಚಾರಗಳನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಮಾಡಿದೆಯೇ ವಿನಃ ಬೇರೆ ಯಾವುದೇ ಕಾರಣದಿಂದ ಮಾಡಿರುವುದಿಲ್ಲ. ಕೆನ್‌ವೀನಿಯನ್ಸ್, ಕಮ್ಯುನಿಕೇಷನ್ ಮತ್ತು ಇನ್‌ಬ್ಯಾಲೆನ್ಸ್ ಬಗ್ಗೆ ಸರ್ಕಾರದ ಒಂದು ಕಮಿಟ್‌ಮೆಂಟ್ ಇದೆ, ಅದು ಏನೆಂದರೆ, ಇನ್‌ಬ್ಯಾಲೆನ್ಸ್ ಯಾವ ಯಾವ ಏರಿಯಾಗಳಲ್ಲಿ ತೆಗೆಯಲಿಕ್ಕೆ ಆಗುತ್ತದೆಯೋ, ಉತ್ತರ ಕರ್ನಾಟಕ ಭಾಗದ ಜನರಿಗೆ ಸಹಾಯವನ್ನು ಮಾಡುವುದಕ್ಕಾಗಿ ಆದ್ಯತೆಯನ್ನು ಮಾಡುತ್ತೇವೆ, ಅದಕ್ಕೆ ನಾವು ತಾತ್ವಿಕವಾಗಿ ಬದ್ಧರಾಗಿದ್ದೇವೆ. ಈ ಒಂದು ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕಳೆದ ವರ್ಷ ಬಜೆಟ್‌ನ ಸಂದರ್ಭದಲ್ಲಿ ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದರು, ಆ ಭಾಗದ ರೈತಾಪಿ ಜನರಿಗೆ ಮತ್ತು ಜನಪ್ರತಿನಿಧಿಗಳಿಗೆ ಭರವಸೆಯನ್ನು ಕೊಟ್ಟಿದ್ದರು. ಅದರಂತೆ ಅದನ್ನು ನಾವು ಜಾರಿಗೆ ತಂದಿದ್ದೇವೆ. ಈಗ ಅಸಮತೋಲನವನ್ನು ತೆಗೆಯುವಂತಹ ದಿಕ್ಕಿನಲ್ಲಿ ಇದು ಒಂದು ಸಣ್ಣ ಪ್ರಯತ್ನವು ಸರ್ಕಾರದ ಕಡೆಯಿಂದ ನಡೆದಿದೆ. ಮಂಡ್ಯ ಪ್ರದೇಶದಲ್ಲಿರುವಂತಹ ಮಾನ್ಯ ಸದಸ್ಯರು ಹಾಗೂ ಜಯಪ್ರಕಾಶಹೆಗಡೆಯವರು ಸೇರಿ ರೀಜನಲ್ ಆಫೀಸಿನ ವಿಚಾರದಲ್ಲಿ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ರೀಜನಲ್ ಆಫೀಸ್‌ನ್ನು ಬೆಂಗಳೂರಿನಲ್ಲಿ ಹಾಕಬೇಕೆನ್ನುವ ಪ್ರಸ್ತಾವನೆಯನ್ನು ಈಗಾಗಲೇ ಆರ್ಥಿಕ ಇಲಾಖೆಗೆ ನಾವು ಕೊಟ್ಟಿದ್ದೇವೆ. ಬಹುಶಃ ಆ ಕಛೇರಿಯನ್ನು ತೆರೆದು ಅದರ ಆಗುಹೋಗುಗಳನ್ನು, ಸಾಧಕಬಾಧಕಗಳ ಬಗ್ಗೆ ವಿಚಾರವನ್ನು ಮಾಡಿ ಆ ಅನುಭವದ ಆಧಾರದ ಮೇಲೆ ಮುಂದೆ ಪುನರ್‌ವಿಮರ್ಶೆ ಮಾಡುವಂತಹ ಅವಶ್ಯಕತೆ ಕಂಡುಬಂದರೆ ಅದನ್ನು ಮಾಡುತ್ತೇವೆ. ಅದರ ಜೊತೆಗೆ ಶುಗರ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಆತ್ಮಾನಂದರವರು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಆ ಬಗ್ಗೆ ಬದ್ಧತೆಯನ್ನು ಇಟ್ಟುಕೊಂಡಿದೆ. ಅದಷ್ಟುಬೇಗ ಬೆಳಗಾವಿಯಲ್ಲಿ ಶುಗರ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ್ನು ತೆರೆದಿದ್ದೇವೆ, ಅದೇ ಪ್ರಕಾರ ಮಂಡ್ಯದಲ್ಲೂ ಕೊಡುವುದಕ್ಕೆ ಸರ್ಕಾರ ತನ್ನ ಬದ್ಧತೆಯನ್ನು ಇಟ್ಟುಕೊಂಡಿದೆ ಎನ್ನುವ ವಿಚಾರವನ್ನು ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ತಿಳಿಸುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಛೇರ್ಮನ್‌ರವರೆ, ಒಂದು ಪ್ರದೇಶದ ಇಂಬ್ಯಾಲೆನ್ಸ್‌ನ್ನು ಸರಿ ಮಾಡಲಿಕ್ಕೆ ಒಂದು ನಿರ್ದೇಶನಾಲಯ ಹೋಗಿ ಸರಿಯಾಗುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ. ಅಲ್ಲಿ ಅಭಿವೃದ್ಧಿಗೆ ಹಣವನ್ನು ಬೇಕಾದರೆ ಕೊಡಲಿ, ಪ್ರಾಯಶಃ ಡೈರಕ್ಟರೇಟ್‌ನ್ನು ತೆಗೆದುಕೊಂಡು ಹೋಗಿ ಬೆಳಗಾಂ ಪ್ರದೇಶವನ್ನು ಸರಿಪಡಿಸುತ್ತೇವೆಂದು ಹೇಳಿದರೆ ಅದು ಸತ್ಯಕ್ಕೆ ದೂರವಾದುದು ಎಂಬುದು ನನ್ನ ಅಭಿಪ್ರಾಯವಾಗಿದೆ.

(ಆ) ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರಸಭೆಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಛೇರ್ಮನ್‌ರವರೆ, ಗುಲ್ಬರ್ಗಾ ಜಿಲ್ಲೆಯ ಸೇಡಂ ಪುರಸಭೆಯಲ್ಲಿ 10ನೇ ಹಣಕಾಸಿನ ಕಾಮಗಾರಿಗಳಲ್ಲಿ ಇನ್ನಿತರ ಹಣದಲ್ಲಿ ಅಧ್ಯಕ್ಷರು ಹಾಗೂ ಪುರಸಭೆಯ ಮುಖ್ಯಾಧಿಕಾರಿಗಳು ಸೇರಿಕೊಂಡು ಅವ್ಯವಹಾರ ಮಾಡಿರುವ